ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೆ, ಬನಶಂಕರಿ 3ನೇ ಹಂತದಲ್ಲಿ ಬರುವ ಗವಿಪುರ ಗುಟ್ಟಹಳ್ಳಿಯಲ್ಲಿನ ಧೋಬಿ ಘಾಟ್ ಹತ್ತಿರ ಕಟ್ಟಿರುವ ಮನೆಗಳಿಗೆ ನೀರನ್ನು ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ. ಎಂದು ನಾನು ಕೇಳಿರುವ ಪ್ರಶ್ನೆಗೆ (ಇಲ್ಲ, ಎಂದು ಹೇಳಿದ್ದೀರಿ. ಈ ಸ್ಥಳ ಬೆಂಗಳೂರು ನಗರ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುತ್ತದೆ. ಈ ಲೇಔಟ್ 20 ವರ್ಷದಿಂದ ಇದೆ. ಅಲ್ಲಿಯ ಜನರು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ನೀರನ್ನು ಕೊಟ್ಟಿಲ್ಲ, ಲೈಟುಗಳನ್ನು ಕೊಟ್ಟಿಲ್ಲ, ರಸ್ತೆಗಳಿಲ್ಲ, ಈ ಮೂರೂ ಇಲ್ಲದೆ ಸುಮಾರು 200 ಮನೆಗಳವರು ಕಳೆದ 20 ವರ್ಷದಿಂದ ಕಾರ್ಪೊರೇಷನ್‌ಗೆ ಓಡಾಡಿ, ಓಡಾಡಿ ಸುಸ್ತಾಗಿದ್ದಾರೆ. ಅವರಿಗೆ ಯಾವುದೇ ರೀತಿಯ ನಾಗರೀಕ ಸೌಲಭ್ಯಗಳೂ ಇಲ್ಲ, ಅವರು ಬೆಂಗಳೂರು ಸಿಟಿಯ ಮಧ್ಯದಲ್ಲಿಯದ್ದರೂ ಕೂಡ ಯಾವುದೋ ಹಳ್ಳಿಯಲ್ಲಿರುವವರಂತೆ ಇದ್ದುಕೊಂಡು ಕಷ್ಟದಿಂದ ವಾಸಮಾಡುತ್ತಿದ್ದಾರೆ. ಇವರಿಗೆ ಕಾರ್ಪೊರೇಷನ್‌ನವರು ನಾಗರೀಕ ಸೌಲಭ್ಯಗಳನ್ನು ಒದಗಿಸುತ್ತಾರೆಯೆ? ಅಥವಾ ಆ ಬಡಾವಣೆಯಲ್ಲಿರತಕ್ಕ ಜನರಿಂದ ಹಣವನ್ನು ವಸೂಲ್ಮಾಡಿಕೊಂಡು ಅವರಿಗೆ ನೀರು, ಲೈಟು, ರಸ್ತೆಗಳನ್ನು ಮಾಡಿಕೊಡುತ್ತಾರೆಯೇ?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಬನಶಂಕರಿ 3ನೇ ಹಂತದಲ್ಲಿ ಬರುವ ಗವಿಪುರ ಗುಟ್ಟಹಳ್ಳಿಯಲ್ಲಿನ ಧೋಬಿಘಾಟ್‌ನ ಹತ್ತಿರ ಕಟ್ಟಿರುವ ಮನೆಗಳಿಗೆ ನೀರನ್ನು ಕೊಡದಿರುವುದು ಸರ್ಕಾರಕ್ಕೆ ಗೊತ್ತಿದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದು ಆ ಬಡಾವಣೆಗೆ ಅಲ್ಲ. ಆದ್ದರಿಂದ ಇಲ್ಲ ಎಂದು ನಾನು ಉತ್ತರ ಕೊಟ್ಟಿದ್ದೇನೆ. ಮೊನ್ನೆ ನಾನು ಇದರ ಬಗ್ಗೆ ವಿಚಾರ ಮಾಡಿದ್ದೇನೆ. ಅಲ್ಲಿ ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನಿಂದ ಸುಮಾರು 20 ಮನೆಗಳನ್ನು ಕಟ್ಟಿದ್ದಾರೆ. ಇದರ ಜೊತೆಗೆ ಇನ್ನೂ 43 ಮನೆಗಳನ್ನು ಕಟ್ಟುತ್ತಿದ್ದಾರೆಂದು ತಿಳಿದುಬಂದಿದೆ. ಅಲ್ಲಿ ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನಿಂದ ಒಂದು ಬೋರ್‌ವೆಲ್‌ನ್ನು ಹಾಕಿಸಿದ್ದಾರೆ. ಇದರ ಜೊತೆಗೆ 4 ಪಬ್ಲಿಕ್ ಟ್ಯಾಪ್ಸ್ ಕೂಡ ಇವೆ. ಇದರ ಜೊತೆಗೆ ಇನ್ನೂ ಯಾರಾದರೂ ತಮ್ಮ ಮನೆಗಳಿಗೆ ನೀರು ಬೇಕೆಂದು ಅರ್ಜಿಗಳನ್ನು ಹಾಕಿಕೊಂಡರೆ ಆದಷ್ಟು ಬೇಗ ನೀರನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಅವರು ಅರ್ಜಿಯನ್ನು ಹಾಕಿದ್ದಾರೆ. ಆದರೆ ಈ ಲೇ ಔಟ್ ನಮಗೆ ಸೇರುವುದಿಲ್ಲ ಎಂದು ಕಾರ್ಪೊರೇಷನ್‌ನವರು ಹೇಳುತ್ತಿದ್ದಾರೆ, ಇದು ಬೆಂಗಳೂರು ಸ್ಲಂ ಕ್ಲಿಯರೆನ್ಸ್ ಬೋರ್ಡಿಗೆ ಸೇರಿಲ್ಲ, ಇದು ಕಾರ್ಪೊರೇಷನ್‌ಗೆ ಸೇರಿದ್ದು. ಆದುದರಿಂದ ಇವರಿಗೆ ಕುಡಿಯುವ ನೀರನ್ನೊದಗಿಸುವುದಕ್ಕೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಅವರು ಅರ್ಜಿಯನ್ನು ನೇರವಾಗಿ ಬೆಂಗಳೂರು ಜಲಮಂಡಲಿಯವರಿಗೆ ಕೊಡಲಿ. ಆದನ್ನು ಕೊಟ್ಟರೆ ಕೂಡಲೇ ಅವರಿಗೆ ನೀರನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಬೆಂಗಳೂರು ಟರ್ಫ್ ಕ್ಲಬ್‌ಗೆ ನೀಡಿರುವ ಸ್ಥಳದ ವಿಸ್ತೀರ್ಣ

2647 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ಗೆ ರಾಜ್ಯ ಸರ್ಕಾರವು ನಗರದ ಮಧ್ಯೆ ನೀಡಿರುವ (ರೇಸ್ ಕೋರ್ಸ್ ಸ್ಥಳದ) ವಿಸ್ತೀರ್ಣವೆಷ್ಟು?

ಅ) ಮೇಲ್ಕಂಡ ರೇಸ್ ಕೋರ್ಸ್‌ನ್ನು ಸ್ಥಳಾಂತರಿಸಿದ ನಂತರ ಸದರಿ ಭೂಮಿಯನ್ನು ನಿವೇಶನಗಳಾಗಿ ಪರಿವರ್ತಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ಆ) ಮೇಲ್ಕಂಡ ಸ್ಥಳಾಂತರವನ್ನು ಶೀಘ್ರವಾಗಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 83 ಎಕರೆ 14 ಗುಂಟೆಗಳು

ಆ) ಇಲ್ಲ

ಇ) (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸ್ವಾಮಿ, ಬೆಂಗಳೂರು ನಗರದ ಮಧ್ಯದಲ್ಲಿರತಕ್ಕ ರೇಸ್‌ಕೋರ್ಸ್‌ನ್ನು ಸ್ಥಳಾಂತರಿಸಿದ ನಂತರ ಸದರಿ ಭೂಮಿಯನ್ನು ನಿವೇಶಗಳಾಗಿ ಪರಿವರ್ತಿಸುವ ಆಲೋಚನೆ ಸರ್ಕಾರದ ಮುಂದಿದೆಯೆ? ಎಂದು ನಾನು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಉತ್ತರ ಹೇಳಿದ್ದಾರೆ. ಆದರೆ ಇದನ್ನು ಸ್ಥಳಾಂತರಿಸಬೇಕು, ನಗರದ ಮಧ್ಯೆ ಈ ರೇಸ್‌ಕೋರ್ಸ್ ಇರತಕ್ಕದ್ದು ಸೂಕ್ತವಲ್ಲ ಎಂದು ಈ ಸದನದಲ್ಲಿ ಬಹಳವಾಗಿ ಚರ್ಚೆಯಾದನಂತರ ಇದಕ್ಕೆ ಒಂದು ಸಮತಿಯನ್ನೂ ಕೂಡ ನೇಮಕ ಮಾಡಲಾಯಿತು. ಆ ಸಮಿತಿ ತನ್ನ ವರದಿಯನ್ನು ಕೊಟ್ಟಿದೆಯೆ? ಕಳೆದ ಸಾರಿ ಪ್ರಶ್ನೆಯನ್ನು ಕೇಳಿದಾಗ ಆ ಸಮಿತಿ ತನ್ನ ವರದಿಯನ್ನು ಕೊಟ್ಟಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆ ವರದಿಯಲ್ಲಿ ಇದನ್ನು ಸ್ಥಳಾಂತರಿಸಬೇಕೆಂಬ ಅಂಶ ಇದ್ದರೆ ಯಾವತ್ತು ಈ ರೇಸ್ ಕೋರ್ಸ್‌ನ್ನು ಸ್ಥಳಾಂತರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ನಗರದ ಮಧ್ಯೆ ಇರತಕ್ಕ ರೇಸ್‌ಕೋರ್ಸ್‌ನ್ನು ಅಂದರೆ ಬೆಂಗಳೂರು ಟರ್ಫ್ ಕ್ಲಬ್‌ನ್ನು ಸ್ಥಳಾಂತರಿಸುವ ಬಗ್ಗೆ ತಾವು ಕೇಳಿದ್ದೀರಿ. ಇದು ಒಟ್ಟು 83.14 ಎಕರೆ ಪ್ರದೇಶ ಇದೆ. ನಾವು ಇದರ ಬಗ್ಗೆ ಹೊಸದಾಗಿ ವಿಚಾರಮಾಡತಕ್ಕ ಅವಶ್ಯಕತೆ ಏನೂ ಇಲ್ಲ. 1987ರಲ್ಲೇ ಒಂದು ತೀರ್ಮಾನವನ್ನು ಮಾಡಿ ಈ ರೇಸ್‌ಕೋರ್ಸ್‌ನ್ನು ನಗರದ ಹೊರಗಡೆ ಸ್ಥಳಾಂತರಿಸಬೇಕೆಂಬ ತೀರ್ಮಾನ ಆಗಿದೆ. ಜಕ್ಕೂರಿಗೆ ಹೋಗುವಾಗ ಅಗ್ರಿಕಲ್ಚರ್ ಕಾಲೇಜಿನ ಹತ್ತಿರ ಸುಮಾರು 168.4 ಎಕರೆ ಜಾಗವನ್ನು ಈಗಾಗಲೇ ಗೊತ್ತುಪಡಿಸಿದೆ. ಅಲ್ಲ ಬೇಲಿಗಿ ಕಾಂಪೌಂಡ್ ವಗೈರೆ ಹಾಕಬೇಕೆಂದು ಇದೆ. ಅಲ್ಲಿ ಒಂದು ಕೆರೆ ಇದೆ. ಅದರ ಪಕ್ಕದಲ್ಲಿ ಸ್ವಲ್ಪ ಒತ್ತುವರಿ ವಿಚಾರದಲ್ಲಿ ಕೆಲವು ಕಾರ್ಟಂ ಹಾಕಬೇಕೆಂದು ನಾವು ಬೆಂಗಳೂರು ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದೇವೆ. ಅದು ಕ್ಲಿಯರ್ ಆಗಬೇಕು. ಆದಾದಮೇಲೆ ಟರ್ಫ್ ಸಿದ್ಧರಾಗಬೇಕಾದರೆ ಇನ್ನೂ ಸ್ವಲ್ಪ ಕಾಲ ಬೇಕಾಗುತ್ತದೆ. ಆದಾದಮೇಲೆ ಈ ರೇಸ್‌ಕೋರ್ಸ್‌ನ್ನು ಸ್ಥಳಾಂತರ ಮಾಡುತ್ತೇವೆ. ಇಲ್ಲಿ ತಮ್ಮ ಪ್ರಶ್ನೆ ಇರತಕ್ಕದ್ದು ಇಲ್ಲಿರತಕ್ಕ ಸುಮಾರು ನೂರು ಎಕರೆ ಜಾಗವನ್ನು ನಿವೇಶನ ಮಾಡುತ್ತೀರಾ ಎಂದು. ಇದನ್ನು ನಿವೇಶನ ಮಾಡುವುದು ಬೇಡ. ಇದಕ್ಕೆ ಬೇರೆ ಏನಾದರೂ ಅಲ್ಟರ್‌ನೇಟಿವ್ ಆಗಿ ಯೋಚನೆ ಮಾಡಿ ಇದನ್ನು ಯಾವ ರೀತಿ ಸದುಪಯೋಗ ಮಾಡಿಕೊಳ್ಳಬಹುದೆಂದು ನೋಡೋಣ. ಇದನ್ನು ಒಂದು ಲಂಗ್ಸ್ ಸ್ಪೇಸ್ ಆಗಿ ಇರುವ ಬಗ್ಗೆ ಇದನ್ನು ಏನು ಮಾಡಬೇಕೆಂದು ಆಮೇಲೆ ಯೋಚನೆ ಮಾಡೋಣ. ತಮ್ಮ ಸಲಹೆಗಳನ್ನೂ ಕೊಡಿ. ಸರ್ಕಾರ ಅದನ್ನು ವಿಚಾರ ಮಾಡುತ್ತದೆ. ಆದರೆ ಈ ಜಾಗದಲ್ಲಿ ಮಾತ್ರ ಸೈಟು, ಬಿಲ್ಡಿಂಗ್, ವಗೈರೆ ಮಾಡುವುದು ಒಳ್ಳೆಯದಲ್ಲ ಎನ್ನತಕ್ಕ ಭಾವನೆಯಿಂದ ನಾನು ಇದನ್ನು ಹೇಳುತ್ತಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : 3 ಉದ್ದೇಶಗಳನ್ನು ಇಟ್ಟುಕೊಂಡು 3 ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಕೇಳಿದ್ದೇನೆ. ರೇಸ್ ಕೋರ್ಸ್‌ನಲ್ಲಿ ನಡೆಯುತ್ತಿರತಕ್ಕ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಸ್ಥಳಾಂತರಿಸದಿದ್ದರೆ ಎಷ್ಟು ಅನಾಹುತವಾಗುತ್ತದೆಂದು ಕೇಳಿದ್ದೆ. ಕಳೆದವಾರ ಈ ಪ್ರಶ್ನೆ ಬಂದಿತ್ತು....

ಅಧ್ಯಕ್ಷರು : ಸ್ಥಳಾಂತರ ಮಾಡಿದರೆ ಅವ್ಯವಹಾರ ನಿಂತು ಹೋಗುತ್ತದೆಂದು ನಿಮ್ಮ ಅಭಿಪ್ರಾಯವೆ?

ಶ್ರೀ ಎಲ್.ಆರ್. ಶಿವರಾಮೇಗೌಡ : ಸ್ವಾಮಿ, ಸ್ಥಳಾಂತರ ಮಾಡದಿದ್ದರೆ ಇವತ್ತು ಎಷ್ಟೋ ಜನ ಹೆಣ್ಣುಮಕ್ಕಳ ಕೊರಳಲ್ಲಿ ತಾಳಿ ಉಳಿಯುವುದಿಲ್ಲ. ಏಕೆಂದರೆ ಸಂಬಳವನ್ನು ತೆಗೆದುಕೊಂಡವರು ನೇರವಾಗಿ ಅಲ್ಲಿಗೆ ಹೋಗುತ್ತಾರೆ. ನನಗೆ ತಿಳಿದಿರುವಂತೆ ಇವತ್ತು ರೇಸ್‌ನಲ್ಲಿ ನನಗೆ ಹಣ ಬಂತು ಎಂದು ಯಾವನೇ ಒಬ್ಬ ಶ್ರೀಮಂತನೂ ಕೂಡ ಹೇಳಿದ್ದನ್ನು ನಾನು ನೋಡಿಲ್ಲ. ಅಲ್ಲಿ ಬಹಳ ಅವ್ಯವಹಾರ ನಡೆಯುತ್ತಿವೆ. ಅನ್ಯಾಯ ನಡೆಯುತ್ತಿವೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಪ್ರತಿದಿನ ಕುದುರೆಯನ್ನು ಓಡಿಸಿದರೆ ಯಾರ ಹೆಣ್ಣುಮಗಳತಾಳಿಯು ಕೂಡ ಉಳಿಯುವುದಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಇಲ್ಲಿ ಪ್ರಶ್ನೆ ಇರತಕ್ಕದ್ದು ತಾಳಿಯನ್ನು ಮಾರತಕ್ಕದ್ದಲ್ಲ.

ಅಧ್ಯಕ್ಷರು : ಮಾನ್ಯ ಶಿವರಾಮೇಗೌಡರಿಗೆ ತಾಳಿಯ ಬಗ್ಗೆ ವಿಶೇಷವಾದ ಕಳಕಳಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಅವರು ಕಟ್ಟಿರತಕ್ಕದ್ದು ಒಂದೇ ತಾಳಿ. ನೀವು ಈ ರೀತಿ ಹೇಳಿ ಅವರು ಮನೆಗೆ ಹೋಗದಂತೆ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ : ನಮ್ಮ ಮುಂದಿರತಕ್ಕ ಪ್ರಶ್ನೆ ಈ ಜಾಗವನ್ನು ಸ್ಥಳಾಂತರ ಮಾಡುತ್ತೀರಾ ಎಂದು ಕೇಳಿದ್ದೀರಿ. ಸ್ಥಳಾಂತರ ಮಾಡತಕ್ಕ ತೀರ್ಮಾನ 1987ರಲ್ಲೇ ಆಗಿದೆ ಎಂದು ನಾನು ಹೇಳಿದ್ದೇನೆ. ಇನ್ನು ಈ ಜಾಗವನ್ನು ಸೈಟುಗಳಾಗಿ ಮಾಡುತ್ತೀರಾ ಎಂದು ಕೇಳಿದ್ದೀರಿ. ಇದು ಒಳ್ಳೆಯದಲ್ಲ ಎಂಬುದನ್ನು ನಾನು ಹೇಳಿದ್ದೇನೆ. ಇದನ್ನು ಲಂಗ್ಸ್ ಸ್ಪೇಸ್ ಆಗಿ ಇಟ್ಟುಕೊಳ್ಳುವುದು ಒಳ್ಳೆಯದೆಂದು ನಾನು ಹೇಳಿದ್ದೇನೆ. ಇನ್ನು ಜೂಜಾಡುವುದು ಇರಬೇಕೆ? ಬೇಡವೆ? ಎಂಬುದು ಬಹಳ ದೊಡ್ಡ ಪ್ರಶ್ನೆ. ತಾವು ದೊಡ್ಡ ಪ್ರಶ್ನೆಯಾಗಿ ಕೇಳಿದರೆ ದೊಡ್ಡ ಉತ್ತರವನ್ನು ನಾನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ಥಳಾಂತರ ಮಾಡತಕ್ಕದ್ದು ಏನಿದೆ ಇದನ್ನು ಕಡ್ಡಾಯವಾಗಿ ಮಾಡುತ್ತೀರಾ? ಏಕೆಂದರೆ ಇದುವರೆಗೆ ಬಂದಂಥ ಎಲ್ಲ ಸರ್ಕಾರಗಳೂ ಇದನ್ನು ಹೊರಗಡೆ ಹಾಕುತ್ತೇವೆ, ಇದನ್ನು ಪಾರ್ಕ್ ಮಾಡುತ್ತೇವೆಂದು ಬರೀ ಬುರುಡೆಯನ್ನೇ ಬಿಟ್ಟುಕೊಂಡು ಬಂದುವು. ಅದೇ ರೀತಿ ತಮ್ಮ ಸರ್ಕಾರವೂ ಹೋಗುತ್ತದೆಯೆ?

ಶ್ರೀ ಎಸ್. ಬಂಗಾರಪ್ಪ : ಕ್ಷಮಿಸಬೇಕು. ಇಲ್ಲಿ ಬುರುಡೆ ಬಿಟ್ಟುಕೊಂಡು ಬರುವುದಕ್ಕೆ ಆಗುವುದಿಲ್ಲ. ಹಿಂದೆ ಕೂಡ ಈ ವಿಚಾರದಲ್ಲಿ ಒಳ್ಳೆಯ ತೀರ್ಮಾನವನ್ನೇ ಮಾಡಿದ್ದಾರೆ. ಆದ್ದರಿಂದ ಹಿಂದಿನ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಈಗ 168 ಎಕರೆ ಜಾಗವನ್ನು ಏನು ಗೊತ್ತು ಮಾಡಿದ್ದಾರೆ ಅದು ಬರೀ ಬುರುಡೆಯಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ನಿಜವಾಗಿ ಬುರುಡೆ ಬಿಟ್ಟುಕೊಂಡು ಬಂದಿದ್ದೀರಿ. ಅದಕ್ಕೆ ಏತಕ್ಕೆ ಹೆದರುತ್ತೀರಿ?

12.40 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಹಿಂದಿನ ಸರ್ಕಾರದವರು ಬುರುಡೆ ಬಿಟ್ಟುಕೊಂಡು ಬಂದರು. ನೀವು ಬಿಡುವುದಿಲ್ಲವೆಂದುಕೊಂಡಿದ್ದೆ. ನೀವೇನಾದರೂ ಆ ರೀತಿ ಬಿಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ನನ್ನ ತೀರ್ಮಾನ ಒಳ್ಳೆಯದಾಗಿರುವುದರಿಂದ ನಾಗರಾಜ್‌ರವರೆ ಪ್ರಶ್ನೆಗೆ ಉತ್ತರ ತೆಗೆದುಕೊಳ್ಳಬೇಕು. ತಾವು ಪ್ರಶ್ನೆ ಕೇಳದೇ ಮಾತನಾಡುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳಿದೆ ನೀವು ಬುರುಡೆ ಬಿಟ್ಟುಕೊಂಡು ಬಂದಿರುತ್ತೀರಿ. ಅವರು ಟೋಪಿ ಹಾಕಿಕೊಂಡು ಬಂದಿರುತ್ತಾರೆ ಎಂದು.

ಶ್ರೀ ಎಸ್. ಬಂಗಾರಪ್ಪ : ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಸಂದರ್ಭದಲ್ಲಿ ಬೇರೆ ವಿಚಾರದಲ್ಲಿ ಬುರುಡೆ ಬಿಟ್ಟಿದ್ದಾರೆ. ಅದೆಲ್ಲ ಬೇರೆ ಚರ್ಚೆ ಮಾಡೋಣ. ಇದಕ್ಕೆ ಸಂಬಂಧಪಟ್ಟ ಹಾಗೆ ಬುರುಡೆಗಿರುಡೆ ಏನು ಕಾಣಿಸುತ್ತಿಲ್ಲ. ಅದರಲ್ಲಿ 168 ಎಕರೆ ಜಕ್ಕೂರ್ ಹತ್ತಿರ ಗೊತ್ತುಮಾಡಿ ಬೇಲಿ ವಗೈರೆ ಹಾಕುವ ಬಗ್ಗೆ ತೀರ್ಮಾನ ಮಾಡಿದ್ದೇವೆ. ಮಾನ್ಯ ಸಭಾದ್ಯಾಕ್ಷರೇ ಮತ್ತೊಂದು ವಿಚಾರ ಹೇಳುವುದಾದರೆ ಇದನ್ನು ಡೆವಲಪ್‌ಮೆಂಟ್ ಮಾಡಬೇಕೆಂದು 1988-89ರಲ್ಲಿ 33 ಲಕ್ಷ ರೂಪಾಯಿಗಳನ್ನು ಹಣವನ್ನು ಕೂಡ ಇಟ್ಟಿದ್ದೇವೆ. 1989-90ರಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು 1990-91ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು 1991-92ನೇ ಸಾಲಿಗೆ ನಾವು ಅದಕ್ಕೆ 20 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಏತಕ್ಕೆಂದರೆ ಕೊನೆಯ ಪಕ್ಷ ಇದು ಶಿಫ್ಟ್ ಮಾಡಿ ಹೊರಗಡೆ ಹಾಕಬೇಕೆನ್ನುವ ದೃಷ್ಟಿಯಿಂದ ಹಣವನ್ನು ಕೂಡ ಜಾಸ್ತಿ ಇಟ್ಟಿದ್ದೇವೆ. ಆದ್ದರಿಂದ 20 ಲಕ್ಷ ರೂಪಾಯಿ ಇಟ್ಟಿರತಕ್ಕಂಥದ್ದು ಏನು ತೋರಿಸುತ್ತದೆಂದರೆ ಅದನ್ನು ಡೆವಲಪ್‌ಮೆಂಟ್ ಮಾಡಬೇಕೆಂದು ಇದರ ಬಗ್ಗೆ ಸರ್ಕಾರ ತೀವ್ರವಾಗಿರತಕ್ಕಂಥ ಗಮನಹರಿಸಿ ಕಾರ್ಯಕ್ರಮ ಹಾಕಿಕೊಂಡಿದೆ.

ನಗರದ ಸರಹದ್ದಿನಲ್ಲಿ ಸಂಚಾರದ ನೂಕುನಗ್ಗಲು

2722 - ಶ್ರೀ ಕೆ.ವಿ. ರವೀಂದ್ರ ನಾಥ ಬಾಬು. (ಕೊಟ್ಟೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸೂರು ರಸ್ತೆ ಮತ್ತು ತುಮಕೂರು ರಸ್ತೆಯಲ್ಲಿ ಸತತವಾಗಿ ಸಂಚಾರ ತಡೆ ಆಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಆ) ಕಛೇರಿ ವೇಳೆಯಲ್ಲಿ (ಪೀಕ್ ಅವರ್ಸ್) ಸಂಚಾರಿ ಪೋಲೀಸರು ಕರ್ತವ್ಯದ ಮೇಲೆ ಇರದಿರುವುದು ನಿಜವೇ?

ಇ) ಈ ಅಡಚಣೆ ಅಸ್ತವ್ಯಸ್ತ, ಕಾಲವ್ಯಯ ಮತ್ತು ಇಂಧನ ವ್ಯಯಕ್ಕೆ ಕಾರಣವಾಗುವುದಿಲ್ಲವೇ?

ಈ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು